**ಜನವರಿ24, 2014**

**2005 ಕ್ಕೂ ಮುಂಚಿತವಾಗಿ ನೀಡಲಾದ ಬ್ಯಾಂಕು ನೋಟುಗಳ ಹಿಂತೆಗೆತ -- ಭಾರತೀಯ ರಿಸರ್ವ್ ಬ್ಯಾಂಕಿನ ಸ್ಪಷ್ಟೀಕರಣ**

ಮೇಲಿನ ವಿಷಯದ ಬಗ್ಗೆ ಜನವರಿ 22, 2014 ರ ನಮ್ಮ ಪತ್ರಿಕಾ ಪ್ರಕಟಣೆ , ಇದಕ್ಕೆ ಬಂದಂತಹ ಪ್ರತಿಕ್ರಿಯೆ ಹಾಗೂ ಪ್ರಶ್ನೆಗಳ ಬಗ್ಗೆ ಮುಂದುವರಿದು ಭಾರತೀಯ ರಿಸರ್ವ ಬ್ಯಾಂಕ್ (ಆರ್ ಬಿ ಐ) ಈ ಮೂಲಕ ಸ್ಪಷ್ಟೀಕರಿಸುವುದೇನೆಂದರೆ, 2005 ಕ್ಕೂ ಮುಂಚಿತವಾಗಿ ಮುದ್ರಿಸಿದ ನೋಟುಗಳ ಹಿಂತೆಗೆತದ ಈ ನಡೆಯ ಹಿಂದಿರುವ ತಾರ್ಕಿಕ ಕಾರಣವೇನೆಂದರೆ ಈ ನೋಟುಗಳು ಕಡಿಮೆ ಸುರಕ್ಷತಾ ಲಕ್ಷಣಗಳನ್ನು ಹೊಂದಿರುವುದು . ಹಳೇ ಶ್ರೇಣಿಯ ನೋಟುಗಳನ್ನು ಹಿಂತೆಗೆದುಕೊಳ್ಳುವ ಈ ಕ್ರಮವು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಚರಣೆಯಲ್ಲಿರುವ ಪದ್ಧತಿಯಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ಇಂತಹ ನೋಟುಗಳನ್ನು ಬ್ಯಾಂಕುಗಳ ಮೂಲಕ ನಿಯತವಾಗಿ ಈ ಮೊದಲಿನಿಂದಲೂ ಹಿಂತೆಗುದುಕೊಳ್ಳುತ್ತಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ಅಭಿಪ್ರಾಯದಲ್ಲಿ , ಪ್ರಸ್ತುತ ಚಲಾವಣೆಯಲ್ಲಿರುವ 2005 ಕ್ಕೂ ಮುಂಚೆ ಮುದ್ರಿಸಿರುವ ನೋಟುಗಳ ಪ್ರಮಾಣವು ಸಾರ್ವಜನಿಕರ ಮೇಲೆ ದೊಡ್ಡ ಮಟ್ಟದಲ್ಲಿ ಪರಿಣಾಮ ಬೀರುವಷ್ಟು ಪ್ರಭಾವ ಹೊಂದಿಲ್ಲ.

ಆದಾಗ್ಯೂ, ಸಾರ್ವಜನಿಕರು ತಮಗೆ ಅನುಕೂಲವಾದಾಗ ಈ ನೋಟುಗಳನ್ನು ಬ್ಯಾಂಕು ಶಾಖೆಗಳಲ್ಲಿ ಬದಲಾಯಿಸಿಕೊಳ್ಳುವ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕಾಗಿ ಸಾರ್ವಜನಿಕರಿಗೆ ಈ ಮೂಲಕ ಸೂಚಿಸಲಾಗಿದೆ . ಮುಂದುವರಿದು ಸೂಚಿಸುವುದೇನೆಂದರೆ ಜುಲೈ 1, 2014 ರ ನಂತರವೂ ಸಹ ಸಾರ್ವಜನಿಕರು ತಮ್ಮಲ್ಲಿರುವ ಹಳೇ ಶ್ರೇಣಿಯ ನೋ ಟುಗಳನ್ನು ಎಷ್ಟು ಪ್ರಮಾಣದಲ್ಲಿ ಬೇಕಾದರೂ ತಮ್ಮ ಖಾತೆಯಿರುವ ಬ್ಯಾಂಕು ಶಾಖೆಗಳಲ್ಲಿ ಬದಲಾಯಿಸಿಕೊಳ್ಳಬಹುದು.

ಸಾರ್ವಜನಿಕರಿಗೆ ಯಾವುದೇ ರೀತಿಯ ಅನಾನುಕೂಲತೆ ಉಂಟಾಗಬಾರದೆಂಬ ಕಾರಣದಿಂದ, ಹಿಂತೆಗೆತ ಪ್ರಕ್ರಿಯೆ ಬಗ್ಗೆ ನಿಗಾವಹಿಸುವಿಕೆ ಹಾಗೂ ಪುನರ್ಪರಿಶೀಲನಾ ಕ್ರಿಯೆಯನ್ನು ಮುಂದುವರಿಸುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಸ್ಪಷ್ಟಪಡಿಸಿದೆ.

ಮೇಲೆ ಏನೇ ಹೇಳಿರಲಿ , 2005 ಕ್ಕೂ ಮುಂಚೆ ಮುದ್ರಿಸಿರುವ ನೋಟುಗಳು ವಿಧಿಮಾನ್ಯ ಚಲಾವಣೆಯಲ್ಲಿ ಮುಂದುವರಿಯುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಸ್ಪಷ್ಟಪಡಿಸಿದೆ.

ಅಲ್ಪನಾ ಕಿಲ್ಲಾವಾಲ
ಪ್ರಧಾನ ಮುಖ್ಯ ಮಹಾ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ: 2013-2014/1491